# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 34/2018**

| | | | | | |
|---|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಚಂದ್ರಕುಮಾರ್ ಹೆಚ್.ಆರ್. | *ಪ್ರಮಾಣ ಮಾಡಿಸಿದ ದಿನಾಂಕಃ* | | |
| **ತಂದೆ ಹೆಸರು** | ಃ | ಲೇಟ್. ಆರ್. ರಾಮಯ್ಯ | **19.02.2020** | | |
| **ವಯಸ್ಸು** | ಃ | **60** ವರ್ಷ | | | |
| **ವೃತ್ತಿ** | ಃ | ನಿವೃತ್ತ ತಹಶೀಲ್ದಾರರು | **ಪ್ರಾ.ಸಾ.** | ಃ | **16** |
| **ವಾಸಸ್ಥಳ** | ಃ | ತುಮಕೂರು | **ಚಾ.ಸಾ.** | ಃ | **44** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ದಿನಾಂಕಃ *10.03.2014* ರಿಂದ ದಿನಾಂಕಃ *31.07.2019* ರವರೆಗೆ ಮೈಸೂರು ತಾಲ್ಲೂಕಿನ ಹೆಚ್ಚುವರಿ ತಹಶೀಲ್ದಾರನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ *07.09.2016* ರಂದು ಪೊಲೀಸ್ ಸಹಾಯಕ ಪೊಲೀಸ್ ಆಯುಕ್ತಕರು ನಗರ ಅಪರಾಧ ವಿಭಾಗ ಮೈಸೂರು ರವರು ತಮ್ಮ ಕಚೇರಿಯ ಹೆಚ್.ಸಿ.*39* ಗಣೇಶ ಇವರ ಮೂಲಕ ನನಗೆ ಪತ್ರವನ್ನು ಕಳುಹಿಸಿ ಅದರಲ್ಲಿ ಉದಯಗಿರಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ *59/2016* ರಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಯಾದ *1* ನೇ ಆರೋಪಿ ಆಬೀದ್ ಪಾಷ ಅಲಿಯಾಸ್ ಭಯ್ಯ ಇವರನ್ನು ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರು ಕೇಂಧ್ರಾ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು ಇವನನ್ನು ಸಾಕ್ಷಿದಾರರಾದ ಶ್ರೀ ಜಯಕುಮಾರ್ ಬಿ.ಕೆ. ಮತ್ತು ಮಹೇಶ ಇವರುಗಳಿಂದ ಕೇಂದ್ರ ಕಾರಾಗೃಹದಲ್ಲಿ ಗುರುತು ಹಚ್ಚುವ ಕವಾಯತು ನಡೆಸಿ ಕೊಡಲು ನ್ಯಾಯಾಲಯ ಆದೇಶಿಸಿರುವುದರಿಂದ ಸದರಿ ಕವಾಯತ್ತನ್ನು ನಡೆಸಿ ವರದಿ ಮಾಡುವಂತೆ ನ್ಯಾಯಾಲಯದ ಆದೇಶದ ಪಟ್ಟಿಯೊಂದಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತಾರೆ ಮುಖ್ಯ ಅಧೀಕ್ಷಕರು ಮೈಸೂರು ಇವರಿಗೆ ನಾನು ದಿನಾಂಕಃ *08.09.2016* ರಂದು ಪತ್ರ ಬರೆದು ಗುರುತು ಹಚ್ಚು ಕವಾಯತ್ತನ್ನು ದಿನಾಂಕಃ *14.09.2016* ರಂದು ಬೆಳಗ್ಗೆ *11.00* ಗಂಟೆಗೆ ಮೈಸೂರು ಕೇಂಧ್ರ ಕಾರಾಗೃಹದಲ್ಲಿ ನಡೆಸಲಾಗುವುದು ಸದರಿ ಕವಾಯತ್ತಿಗೆ ಎಲ್ಲಾ ಸೂಕ್ತ ಏರ್ಪಾಡುಗಳನ್ನು ಮಾಡುವಂತೆ ಮುಖ್ಯ ಅಧೀಕ್ಷಕರು ಕೇಂದ್ರ ಕಾರಾಗೃಹ, ಮೈಸೂರು ಇವರಿಗೆ ಬರೆದ ಪತ್ರವನ್ನು ಬರೆದಿರುತ್ತೇನೆ ಅದೇ ರೀತಿ ಈ

ಪ್ರಕರಣದಲ್ಲಿನ ಸಾಕ್ಷಿದಾರರಾದ ಶ್ರೀ ಜಯಕುಮಾರ್ ಮತ್ತು ಮಹೇಶ ಇವರಿಗೂ ಕೂಡ ಗುರುತು ಹಚ್ಚುವ ಕವಾಯತ್ತಿನ ಸಮಯದಲ್ಲಿ ಹಾಜರಿರಬೇಕು ಎಂದು ಲಿಖಿತ ಪತ್ರವನ್ನು ಆರಕ್ಷಕ ನಿರೀಕ್ಷಕರು ಉದಯಗಿರಿ ಪೊಲೀಸ್ ಠಾಣೆ ಇವರ ಮುಲಕ ಜಾರಿ ಮಾಡಿಸಿರುತ್ತೇನೆ. ಸಹಾಯಕ ಆಯುಕ್ತರು ಮೈಸೂರು ನನಗೆ ದೂರವಾಣಿ ಮುಖಾಂತರ ಮಾಹಿತಿ ನೀಡಿ ಆ ದಿನ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವುದರಿಂದ ಗುರುತು ಹಚ್ಚುವ ಕವಾಯತ್ತನ್ನು ಅದೇ ದಿನ ಮಧ್ಯಾಹ್ನ *3.00* ಗಂಟೆಗೆ ನಡೆಸಿಕೊಡುವಂತೆ ಕೋರಿರುತ್ತಾರೆ. ಅದರಂತೆ ನಾನು ನಮ್ಮ ಸಿಬ್ಬಂದಿಯೊಂದಿಗೆ ದಿನಾಂಕಃ *14.09.2016* ರಂದು ಮಧ್ಯಾಹ್ನ ಸುಮಾರು *2.45* ಗಂಟೆಯ ಸಮಯದಲ್ಲಿ ಮೈಸೂರಿನ ಕೇಂದ್ರ ಕಾರಾಗೃಹದ ಬಳಿ ಹಾಜರಾಗಿರುತ್ತೇನೆ. ಸಾಕ್ಷಿದಾರರು ಹಾಜರು ಇರುವುದನ್ನು ಖಚಿತ ಪಡಿಸಿಕೊಂಡಿರುತ್ತೇನೆ. ನಂತರ ನಾನು ಕೇಂದ್ರ ಕಾರಾಗೃಹದ ಒಳಗೆ ಹೋಗಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರನ್ನು ಭೇಟಿ ಮಾಡಿ ಗುರುತು ಹುಚ್ಚುವ ಕವಾಯತ್ತಿಗೆ ಮಾಡಿರುವ ಏರ್ಪಾಡುಗಳ ಬಗ್ಗೆ ವಿಚಾರಿಸಿ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ. ಅದರಂತೆ ಕವಾಯತ್ತು ನಡೆಯುವ ಕೇಂದ್ರ ಕಾರಾಗೃಹದ ಒಳ ಆವರಣದಲ್ಲಿರುವ ಧ್ಯಾನ ಮಂದಿರದ ಮುಂಭಾಗದಲ್ಲಿ *1* ನೇ ಆರೋಪಿಯು ಹಾಜರಿರುವುದನ್ನು ಕಾರಾಗೃಹದ ಸಿಬಬಂದಿ ತೋರಿಸಿರುತ್ತಾರೆ. *1* ನೇ ಆರೋಪಿ ಆಬೀಬ್ ಪಾಷ ಈತನಿಗೆ ಹೋಲಿಕೆ ಇರುವ ಇತರೆ *9* ಮಂದಿ ವಿಚಾರಣಾಧೀನ ಬಂಧಿಗಳನ್ನು ಕರೆಯಿಸಿ ನಾನೇ ಆಯ್ಕೆ ಮಾಡಿಕೊಂಡು ಅವರ ವಿವರಗಳನ್ನು ದಾಖಲು ಮಾಡಿರುತ್ತೇನೆ. ಎಲ್ಲರಿಗೂ ಕ್ರಮಸಂಖ್ಯೆಯನ್ನು ನೀಡಿರುತ್ತೇನೆ ಅದರಂತೆ *1* ನೇ ಆರೋಪಿ ಆಬೀದ್ ಪಾಷ ಈತನಿಗೆ ಕ್ರಮ ಸಂಖ್ಯೆ *6* ಎಂದು ನೀಡಿರುತ್ತೇನೆ. ಕೇಂದ್ರ ಕಾರಾಗೃಹದ ಹೊರ ಆವರಣದಲ್ಲಿದ್ದ ಸಾಕ್ಷಿದಾರರಾದ ಜಯಕುಮಾರ ಬಿ.ಕೆ. ಇವರನ್ನು ಒಳಗಡೆ ಕರೆಯಿಸಿಕೊಂಡು ಆರೋಪಿ ಮತ್ತು ಇತರರಿಗೆ ಕಾಣದಂತೆ ಪ್ರತ್ಯೇಕ ಕೊಠಡಿಯಲ್ಲಿ ಇರಿಸಲಾಗಿತ್ತು.

*1* ನೇ ಸುತ್ತಿನಲ್ಲಿ ಆರೋಪಿ ಮತ್ತು ಇತರೆ ಆರೋಪಿಗಳ ಜೊತೆ ಸಾಲಿನಲ್ಲಿ ನಿಲ್ಲಿಸಲಾಯಿತು. ಆರೋಪಿಯನ್ನು ಎಡದಿಂದ ಬಲಕ್ಕೆ *6* ನೇ ಸ್ಥಾನದಲ್ಲಿ ನಿಲ್ಲಿಸಲಾಯಿತು. ಸಾಕ್ಷಿದಾರರನ್ನು ಅವರಿದ್ದ ಕೋಣೆಯಿಂದ ಕರೆಯಿಸಿ ಕೆಲವೊಂದು ಪ್ರಶ್ನೆಗಳನ್ನು ಕೇಳಿ ಅವರಿಂದ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಸಾಲಿನಲ್ಲಿ ನಿಂತ ವ್ಯಕ್ತಿಗಳನ್ನು ತೋರಿಸಿ ಇವರುಗಳ ಪೈಕಿ ಆರೋಪಿಯನ್ನು ಗುರುತಿಸಲು ಬಿಡಲಾಯಿತು. ಸಾಲಿನಲ್ಲಿ ಎಡದಿಂದ ಬಲಕ್ಕೆ *6* ನೇ

ಸ್ಥಾನದಲ್ಲಿ ನಿಂತಿರುವ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ. ಗುರುತಿಸಿರುವುದು ಸರಿ ಇರುತ್ತದೆ. ನಂತರ ಸಾಕ್ಷಿದಾರನನ್ನು ಅವರಿದ್ದ ಕೋಣೆಗೆ ವಾಪಸ್ ಕಳುಹಿಸಿದ್ದೆನು.

*2* ನೇ ಸುತ್ತಿನಲ್ಲಿ ಆರೋಪಿಯನ್ನು ಇತರರೊಂದಿಗೆ ಸ್ಥಳ ಬದಲಾವಣೆ ಮಾಡಿ ಆರೋಪಿಯನ್ನು ಎಡದಿಂದ ಬಲಕ್ಕೆ *3* ನೇ ಸ್ಥಾನದಲ್ಲಿ ನಿಲ್ಲಿಸಲಾಯಿತು. ಸಾಕ್ಷಿದಾರರನ್ನು ಅವರಿದ್ದ ಕೋಣೆಯಿಂದ ಕರೆಯಿಸಿ ಸಾಲಿನಲ್ಲಿ ನಿಂತ ವ್ಯಕ್ತಿಗಳನ್ನು ತೋರಿಸಿ ಇವರುಗಳ ಪೈಕಿ ಆರೋಪಿಯನ್ನು ಗುರುತಿಸಲು ಬಿಡಲಾಯಿತು. ಸಾಲಿನಲ್ಲಿ ಎಡದಿಂದ ಬಲಕ್ಕೆ *3* ನೇ ಸ್ಥಾನದಲ್ಲಿ ನಿಂತಿರುವ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ, ಗುರುತಿಸಿರುವುದು ಸರಿ ಇರುತ್ತದೆ. ನಂತರ ಸಾಕ್ಷಿದಾರನನ್ನು ಅವರಿದ್ದ ಕೋಣೆಗೆ ವಾಪಸ್ ಕಳುಹಿಸಿದ್ದೆನು.

*3* ನೇ ಸುತ್ತಿನಲ್ಲಿ ಆರೋಪಿ ತಾನು ಇಚ್ಚಿಸಿದಲ್ಲಿ ಬಟ್ಟೆಗಳನ್ನು ಬದಲಾಯಿಸಿಕೊಂಡು ಬರಲು ತಿಳಿಸಿರುತ್ತೇನೆ. ಅದಕ್ಕೆ ಆರೋಪಿಯು ಒಪ್ಪಿರುತ್ತಾನೆ. ಬಟ್ಟೆಯನ್ನು ಬದಲಾಯಿಸಿಕೊಂಡು ಆರೋಪಿಯನ್ನು ಎಡದಿಂದ ಬಲಕ್ಕೆ *9* ನೇ ಸ್ಥಾನದಲ್ಲಿ ನಿಲ್ಲಿಸಲಾಯಿತು. ಸಾಕ್ಷಿದಾರರನ್ನು ಅವರಿದ್ದ ಕೋಣೆಯಿಂದ ಕರೆಯಿಸಿ ಸಾಲಿನಲ್ಲಿ ನಿಂತ ವ್ಯಕ್ತಿಗಳನ್ನು ತೋರಿಸಿ ಇವರುಗಳ ಪೈಕಿ ಆರೋಪಿಯನ್ನು ಗುರುತಿಸಲು ಬಿಡಲಾಯಿತು. ಸಾಲಿನಲ್ಲಿ ಎಡದಿಂದ ಬಲಕ್ಕೆ *9* ನೇ ಸ್ಥಾನದಲ್ಲಿ ನಿಂತಿರುವ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ, ಗುರುತಿಸಿರುವುದು ಸರಿ ಇರುತ್ತದೆ. ನಂತರ ಸಾಕ್ಷಿದಾರನನ್ನು ಅವರಿದ್ದ ಕೋಣೆಗೆ ವಾಪಸ್ ಕಳುಹಿಸಿದ್ದೆನು. *3* ಸುತ್ತಿನಲ್ಲೂ ಇದೇ ವ್ಯಕ್ತಿ ಆರೋಪಿ ಎಂದು ಹೇಗೆ ಗುರುತಿಸಿದ್ದೀರಿ ಎಂದು ಕೇಳಿದ್ದಕ್ಕೆ ಸಾಕ್ಷಿದಾರರು ಕೃತ್ಯ ನಡೆದಾಗ ಸಂಜೆ ಸುಮಾರು *5.00* ಗಂಟೆ ಸಮಯ ಈ ವ್ಯಕ್ತಿ ಮಚ್ಚಿನಿಂದ ನನ್ನ ಸ್ನೇಹಿತ ರಾಜು ಈತನ ತಲೆ ಮತ್ತು ಕತ್ತಿನ ಹಿಂಭಾಗಕ್ಕೆ ಹೊಡೆದ ನಾನು ರಾಜುವಿನ ಪಕ್ಕದಲ್ಲಿ ಇದ್ದೆ ಆರೋಪಿಯ ಮುಖ ಪರಿಚಯ ಇತ್ತು ಆದ್ದರಿಂದ ಆತನನ್ನು ಗುರುತಿಸಿರುತ್ತೇನೆ ಎಂದು ಹೇಳುತ್ತಾರೆ. ಈ ಬಗ್ಗೆ ದೃಢೀಕರಣ ಮಾಡಿ ಸಹಿ ಮಾಡಿರುತ್ತೇನೆ. ಗುರುತು ಹಚ್ಚುವ ಕವಾಯ್ತನ್ನು ಈಗಾಗಲೇ ನಿ.ಪಿ.*3* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*3*(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರನಾದ ಜಯಕುಮಾರ ಈತನ ಸಹಿಯನ್ನು ಈಗಾಗಲೇ .ಪಿ.*3*(ಎ) ಎಂದು ಗುರುತಿಸಲಾಗಿದೆ. ಸಾಕ್ಷಿದಾರನಾದ ಜಯಕುಮಾರ ಈತನನ್ನು ಕಾರಾಗೃಹದ ಹೊರಗಡೆ ಕಳುಹಿಸಲಾಯಿತು.

ನಂತರ *2* ನೇ ಸಾಕ್ಷಿದಾರನಾದ ಮಹೇಶ್ ಈತನನ್ನು ಕಾರಾಗೃಹದ ಒಳಗಡೆ ಕರೆಯಿಸಿ ಆರೋಚಿ ಮತ್ತು ಇತರರಿಗೆ ಕಾಣದಂತೆ ಪ್ರತ್ಯೇಕ ಕೊಠಡಿಯಲ್ಲಿ ಇರಿಸಲಾಯಿತು. ನಂತರ ಆರೋಪಿ ಮತ್ತು ಇತರೆ *9* ಜನರನ್ನು *1* ನೇ ಸುತ್ತಿನಲ್ಲಿ ಒಂದೇ ಸಾಲಿನಲ್ಲಿ ನಿಲ್ಲಿಸಲಾಯಿತು. *1* ನೇ ಆರೋಪಿ ಈತನನ್ನು ಕ್ರಮ ಸಂಖ್ಯೆ *1* ನ್ನು ನೀಡಲಾಯಿತು. ಕ್ರಮ ಸಂಖ್ಯೆ *1* ನ್ನು ನೀಡಿ ಎಡದಿಂದ ಬಲಕ್ಕೆ *1* ನೇ ಸ್ಥಾನದಲ್ಲಿ ಸಾಲಿನಲ್ಲಿ ನಿಲ್ಲಿಸಲಾಯಿತು. ಸಾಕ್ಷಿದಾರರನ್ನು ಅವರಿದ್ದ ಕೋಣೆಯಿಂದ ಕರೆಯಿಸಿ ಕೆಲವೊಂದು ಪ್ರಶ್ನೆಗಳನ್ನು ಕೇಳಿ ಅವರಿಂದ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಸಾಲಿನಲ್ಲಿ ನಿಂತ ವ್ಯಕ್ತಿಗಳನ್ನು ತೋರಿಸಿ ಇವರುಗಳ ಪೈಕಿ ಆರೋಪಿಯನ್ನು ಗುರುತಿಸಲು ಬಿಡಲಾಯಿತು. ಸಾಲಿನಲ್ಲಿ ಎಡದಿಂದ ಬಲಕ್ಕೆ *1* ನೇ ಸ್ಥಾನದಲ್ಲಿ ನಿಂತಿರುವ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ. ಗುರುತಿಸಿರುವುದು ಸರಿ ಇರುತ್ತದೆ. ನಂತರ ಸಾಕ್ಷಿದಾರನನ್ನು ಅವರಿದ್ದ ಕೋಣೆಗೆ ವಾಪಸ್ ಕಳುಹಿಸಿದ್ದೆನು.

*2* ನೇ ಸುತ್ತಿನಲ್ಲಿ ಆರೋಪಿಯನ್ನು ಇತರರೊಂದಿಗೆ ಸ್ಥಳ ಬದಲಾವಣೆ ಮಾಡಿ ಆರೋಪಿಯನ್ನು ಎಡದಿಂದ ಬಲಕ್ಕೆ *6* ನೇ ಸ್ಥಾನದಲ್ಲಿ ನಿಲ್ಲಿಸಲಾಯಿತು. ಸಾಕ್ಷಿದಾರರನ್ನು ಅವರಿದ್ದ ಕೋಣೆಯಿಂದ ಕರೆಯಿಸಿ ಸಾಲಿನಲ್ಲಿ ನಿಂತ ವ್ಯಕ್ತಿಗಳನ್ನು ತೋರಿಸಿ ಇವರುಗಳ ಪೈಕಿ ಆರೋಪಿಯನ್ನು ಗುರುತಿಸಲು ಬಿಡಲಾಯಿತು. ಸಾಲಿನಲ್ಲಿ ಎಡದಿಂದ ಬಲಕ್ಕೆ *6* ನೇ ಸ್ಥಾನದಲ್ಲಿ ನಿಂತಿರುವ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ, ಗುರುತಿಸಿರುವುದು ಸರಿ ಇರುತ್ತದೆ. ನಂತರ ಸಾಕ್ಷಿದಾರನನ್ನು ಅವರಿದ್ದ ಕೋಣೆಗೆ ವಾಪಸ್ ಕಳುಹಿಸಿದ್ದೆನು.

*3* ನೇ ಸುತ್ತಿನಲ್ಲಿ ಆರೋಪಿ ತಾನು ಇಚ್ಚಿಸಿದಲ್ಲಿ ಬಟ್ಟೆಗಳನ್ನು ಬದಲಾಯಿಸಿಕೊಂಡು ಬರಲು ತಿಳಿಸಿರುತ್ತೇನೆ. ಅದಕ್ಕೆ ಆರೋಪಿಯು ಒಪ್ಪಿರುವುದಿಲ್ಲ. ನಂತರ ಆರೋಪಿಯನ್ನು ಎಡದಿಂದ ಬಲಕ್ಕೆ *8* ನೇ ಸ್ಥಾನದಲ್ಲಿ ನಿಲ್ಲಿಸಲಾಯಿತು. ಸಾಕ್ಷಿದಾರರನ್ನು ಅವರಿದ್ದ ಕೋಣೆಯಿಂದ ಕರೆಯಿಸಿ ಸಾಲಿನಲ್ಲಿ ನಿಂತ ವ್ಯಕ್ತಿಗಳನ್ನು ತೋರಿಸಿ ಇವರುಗಳ ಪೈಕಿ ಆರೋಪಿಯನ್ನು ಗುರುತಿಸಲು ಬಿಡಲಾಯಿತು. ಸಾಲಿನಲ್ಲಿ ಎಡದಿಂದ ಬಲಕ್ಕೆ *8* ನೇ ಸ್ಥಾನದಲ್ಲಿ ನಿಂತಿರುವ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ. ಗುರುತಿಸಿರುವುದು ಸರಿ ಇರುತ್ತದೆ. ನಂತರ ಸಾಕ್ಷಿದಾರನನ್ನು ಅವರಿದ್ದ ಕೋಣೆಗೆ ವಾಪಸ್ ಕಳುಹಿಸಿದ್ದೆನು. *3* ಸುತ್ತಿನಲ್ಲೂ ಇದೇ ವ್ಯಕ್ತಿ ಆರೋಪಿ ಎಂದು ಹೇಗೆ ಗುರುತಿಸಿದ್ದೀರಿ ಎಂದು ಕೇಳಿದ್ದಕ್ಕೆ ಸಾಕ್ಷಿದಾರರು ಕೃತ್ಯ ನಡೆದಾಗ ಸಂಜೆ ಸಮಯದಲ್ಲಿ ಮಾಮಾಲಿನಂತೆ ನಾನು ಇಂಡಿಯನ್

ಬ್ಯಾಂಕ್ ಎ.ಟಿ.ಎಮ್. ನಲ್ಲಿ ಸೆಕ್ಯೂಟಿರಿ ಕೆಲಸದಲ್ಲಿದ್ದೆ. ಆ ರಸ್ತೆಯ ಮತ್ತೊಂದು ದಿಕ್ಕಿನಲ್ಲಿ ಎದುರಿಗೆ ಇರುವ ಟೀ ಅಂಗಡಿಯಲ್ಲಿ ರಾಜು ಟೀ ಕುಡಿಯುತ್ತಿದ್ದಾಗ ಈ ವ್ಯಕ್ತಿ ಸ್ಕೂಟರ್ ನಲ್ಲಿ ಹಿಂದೆ ಕುಳಿತಿದ್ದವನು ಕೆಳಗೆ ಇಳಿದು ತನ್ನ ಕೈಯಲ್ಲಿದ್ದ ಲಾಂಗ್ ನಿಂದ ರಾಜುವಿನ ಕತ್ತಿಗೆ ಹೊಡೆದದ್ದನು ನಾನು ನೋಡಿದೆ ಆದುದರಿಂದ ಆ ವ್ಯಕ್ತಿಯನ್ನು ನಾನು ಗುರುತಿಸಿರುತ್ತೇನೆ ಎಂದು ಹೇಳುತ್ತಾರೆ. ಈ ಬಗ್ಗೆ ದೃಢೀಕರಣ ಮಾಡಿ ಸಹಿ ಮಾಡಿರುತ್ತೇನೆ. ಗುರುತು ಹಚ್ಚುವ ಕವಾಯ್ತನ್ನು ಈಗಾಗಲೇ ನಿ.ಪಿ.*3* ಎಂದು ಗುರುತಿಲಾಗಿದೆ, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*3(ಸಿ)* ಎಂದು ಗುರುತಿಸಲಾಯಿತು. ಸಾಕ್ಷಿದಾರನಾದ ಮಹೇಶ ಈತನ ಸಹಿಯನ್ನು ಈಗಾಗಲೇ ನಿ.ಪಿ.*3(ಡಿ)* ಎಂದು ಗುರುತಿಸಲಾಗಿದೆ. ಸಾಕ್ಷಿದಾರನಾದ ಜಯಕುಮಾರ ಈತನನ್ನು ಕಾರಾಗೃಹದ ಹೊರಗಡೆ ಕಳುಹಿಸಲಾಯಿತು.

ಗುರುತು ಹಚ್ಚುವ ಕವಾಯತ್ತು ನಿ.ಪಿ.*3* ಇವರ ನಡವಳಿ *(9* ಪುಟ*)* ಗಳನ್ನು ಪತ್ರದೊಂದಿಗೆ ಲಗತ್ತಿಸಿ ನ್ಯಾಯಾಲಯಕ್ಕೆ ಮೊಹರು ಮಾಡಿದ ಲಕೋಟೆಯೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಮೂರುವರೆ ವರ್ಷ ಆಗಿದ್ದರಿಂದ ಗುರುತು ಹಚ್ಚಲು ಆಗುವುದಿಲ್ಲ ಎಂದು ಹೇಳುತ್ತಾರೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

. ಗುರುತು ಹಚ್ಚುವ ಕವಾಯತ್ತಿನಲ್ಲಿ ಹಾಜರಿದ್ದ *1* ನೇ ಆರೋಪಿತನನ್ನು ಇಂದು ನ್ಯಾಯಾಲಯದ ಮುಂದೆ ಇದ್ದರೂ ಕೂಡ ಉದ್ದೇಶ ಪೂರ್ವಕವಾಗಿ ಆರೋಪಿತನಿಗೆ ಸಹಾಯ ಮಾಡಲು ಆತನನ್ನು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಎಲ್ಲಾ ಆರೋಪಿತರ ಪರ ವಕೀಲರಿಂದಃ-</u>

. ಸಾಕ್ಷಿದಾರರಿಗೆ ನಾನೇ ಲಿಖಿತ ನೋಟೀಸು ನೀಡಿ ಪೊಲೀಸರ ಮುಖಾಂತರ ಜಾರಿ ಮಾಡಿಸಿರುತ್ತೇನೆ. ಗುರುತು ಹಚ್ಚುವ ಕವಾಯತ್ತಿನಲ್ಲಿ ನನ್ನ ಜೊತೆ ನನ್ನ ಸಿಬ್ಬಂದಿಯವರು ಹಾಗೂ ಕೇಂದ್ರ ಕಾರಾಗೃಹದ ಸಿಬ್ಬಂದಿಯವರು ಇದ್ದರು ಪೊಲೀಸರು ಇರಲಿಲ್ಲ. ನಾನು ಕಾರಾಗೃಹಕ್ಕೆ ಹೋಗುವಕ್ಕಿಂತ ಮೊದಲು ಸಿ.ಸಿ.ಬಿ. ಪೊಲೀಸರು ಸಾಕ್ಷಿದಾರರನ್ನು ಕಾರಾಗೃಹದ ಹೊರ ಆವರಣದಲ್ಲಿ ನಿಲ್ಲಿಸಿದ್ದರು. ಆರೋಪಿತನ ಜೊತೆ *3* ಸುತ್ತಿನಲ್ಲೂ ಕೂಡ *9* ವ್ಯಕ್ತಿಗಳು ಅವರೇ ಇದ್ದರು ಎಂದರೆ ಸರಿ ಇದೆ. *9* ವ್ಯಕ್ತಿಗಳ ಚಹರೆ ಪಟ್ಟಿ ವರದಿಯಲ್ಲಿ ಬರೆದಿಲ್ಲ ಎಂದರೆ ಸರಿ ಇದೆ. ಒಂದೇ ವ್ಯಕ್ತಿ *9* ಜನರಲ್ಲಿ ಅದಲು ಬದಲು ಆಗಿ ನಿಂತಾಗ ಸುಲಭವಾಗಿ ಗುರುತಿಸಬಹುದು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಜೊತೆ ನಿಲ್ಲಿಸಿದ ವ್ಯಕ್ತಿಗಳು ವಿಚಾರಣಾಧೀನ ಬಂಧಿಗಳು ಇದ್ದರು. ಸದರಿ *9* ವ್ಯಕ್ತಿಗಳನ್ನು ಆರೋಪಿ ಜೊತೆ ನಿಲ್ಲಿಸಲು ನಾನೇ ಆಯ್ಕೆ ಮಾಡಿಕೊಂಡಿರುತ್ತೇನೆ. ಧ್ಯಾನ ಮಂದಿರದ ಆವರಣದ ಬಳಿ ವಿಚಾರಣಾಧೀನ ಬಂಧಿಗಳನ್ನು ಕರೆಯಿಸಿ ಅರದಲ್ಲಿ ಆರೋಪಿಗೆ ಹೋಲಿಕೆ ಇರುವ *9* ಜನರನ್ನು ಆಯ್ಕೆ ಮಾಡಿಕೊಂಡಿರುತ್ತೇನೆ. ಆರೋಪಿಯನ್ನು ಗುರುತಿಸಲು ಸಾಕ್ಷಿಯನ್ನು ಸುಮಾರು *10* ರಿಂದ *15* ಅಡಿ ದೂರ ಇರುವ ಒಂದು ಪ್ರತ್ಯೇಕ ಕೋಣೆಯಲ್ಲಿ ಆರೋಪಿಗೆ ಕಾಣದಂತೆ ಇರಿಸಲಾಗಿತ್ತು. ಸಾಕ್ಷಿದಾರರಿಗೆ ಇರಿಸಿದ ಕೋಣೆಯ ಚಕ್ಕುಬಂದಿ ಬರೆದಿರುವುದಿಲ್ಲ ಮತ್ತು ಕಿಟಕಿ ಬಾಗಿಲುಗಳು ಯಾವ ದಿಕ್ಕಿಗೆ ಇವೆ ಎಂದು ಬರೆದಿರುವುದಿಲ್ಲ. ನನ್ನ ಜೊತೆ ಬಂದ ಸಿಬ್ಬಂದಿಯವರ ಸಹಿ ಗುರುತು ಹಚ್ಚುವ ಕವಾಯತ್ತಿನ ಮೇಲೆ ತೆಗೆದುಕೊಂಡಿರುವುದಿಲ್ಲ. ಪೊಲೀಸರು ನನಗೆ ಪತ್ರ ಬರೆದಾಗ ಆರೋಪಿಯ ಹೆಸರು, ವಿಳಾಳ ಮತ್ತು ಇತರೆ ಇಬ್ಬರೂ ಸಾಕ್ಷಿದಾರರ ಹೆಸರು ಮತ್ತು ವಿಳಾಸ ಹಾಗೂ ನ್ಯಾಯಾಲಯದ ಅನುಮತಿ ಪತ್ರವನ್ನು ಲಗತ್ತಿಸಿದ್ದರು. ಆರೋಪಿಯನ್ನು ನ್ಯಾಯಾಲಯದ ಮುಂದೆ ಎಷ್ಟು ಸಲ ಹಾಜರುಪಡಿಸಿದ್ದರೂ ಎಂಬ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಘಟನೆ ಬಗ್ಗೆ ನಾನು ದಿನಪತ್ರಿಕೆಯಲ್ಲಿ ಬಂದ ಬಗ್ಗೆ ನೋಡಿರುತ್ತೇನೆ. ನಾನು ಪೊಲೀಸರ ಹೇಳಿಕೆಯ ಮೇರೆಗೆ ಗುರುತಿನ ಕವಾಯತ್ತು ನನ್ನ ಕಚೇರಿಯಲ್ಲೇ ತಯಾರಿಸಿ ಅಲ್ಲಿಯೇ ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಕಾರಾಗೃಹದಲ್ಲಿ ಯಾವುದೇ ಗುರುತಿನ ಕವಾಯತ್ತು ನಡೆದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿದಾರರು ಆರೋಪಿಯನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಗುರುತಿಸದೇ ಇದ್ದರೂ ಸಹ ಪೊಲೀಸರ ಮಾತು ಕೇಳಿ ಸಾಕ್ಷಿದಾರರು ಆರೋಪಿಯನ್ನು ಗುರುತಿಸಿರುತ್ತಾರೆ ಎಂದು ಸುಳ್ಳು ವರದಿಯನ್ನು ಕೊಟ್ಟಿರುತ್ತೇನೆ

ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ:-*** ***ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***